

ಅಡಿಕೆ ಕೊನೆಗಳನ್ನು ಕಾರ್ಬನ್ ಫೈಬರ್ ದೋಟಿ ಮೂಲಕ ಕೊಯ್ಲು ಮಾಡುತ್ತಿರುವ ಕಾರ್ಮಿಕರು

ನಡುವೆ ಇಡೀ ದಿನ ಅಡಿಕೆಯೆದುರು ಕೂರುವುದು ಕಷ್ಟ' ಎಂದು ಶಿರಸಿಯ ಅಡಿಕೆ ಕೃಷಿಕ ರಾಜೇಶ ನಾಯ್ಕ ಹೇಳುತ್ತಾರೆ.

ಕೆಲವೆಡೆ ಅಡಿಕೆ ಕಣದ (ಅಡಿಕೆಯನ್ನು ಬಿಸಿಲಿಗೆ ಒಣಗಿಸುವ ಬಯಲು) ಇಕ್ಕೆಲಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಕೆ ಮಾಡಿ, ಕೆಲಸ ಸುಲಭ ಮಾಡಿಕೊಂಡಿದ್ದಾರೆ. ಕೆಲವೆಡೆ ಚಿರತೆ, ಹಂದಿ, ಕಾಡುಪ್ರಾಣಿಗಳಿಂದ ರಕ್ಷಣೆಗೂ ಇದು ಅನುಕೂಲವಾಗಿದೆ. ಕಡಿಮೆ ವೆಚ್ಚದಲ್ಲಾದರೂ ಸಿಸಿಟಿವಿ ಕ್ಯಾಮೆರಾ ಅಳವಡಿಕೆಯಿಂದ ಕಳ್ಳತನ ಮಾಡುವುದು ತಪ್ಪಿದೆ.

## ಬೆಳೆಗಾರರ ಮನೆಗೆ ಬಾರದ ಉತ್ಪನ್ನ

'ಶಿವಮೊಗ್ಗ, ದಾವಣಗೆರೆ, ಹಾವೇರಿ ಭಾಗದಲ್ಲಿ ಬಹುತೇಕ ಬೆಳೆಗಾರರು ಫಸಲು ಗುತ್ತಿಗೆ ನೀಡುತ್ತಾರೆ. ಅಡಿಕೆ ಉತ್ಪನ್ನ ಬೆಳೆದ ಬೆಳೆಗಾರನ ಮನೆಗೆ ಬರುವುದೇ ಇಲ್ಲ. ಗುತ್ತಿಗೆದಾರರು ತೋಟದಲ್ಲಿ ಕೊನೆ ಕೊಯ್ಲು ಮಾಡಿ ಗಾಡಿಗೆ ಏರಿಸಿ ನೇರವಾಗಿ ಕೊಂಡೊಯ್ಯುವ ವ್ಯವಸ್ಥೆ ಹೆಚ್ಚಿದೆ. ಕೆಲವೇ ಮಂದಿ ಸಾಂಪ್ರದಾಯಿಕ ಕೃಷಿ ಉಳಿಸಿಕೊಂಡಿದ್ದು, ಅದು ಕೂಡ ಕಾಲದ ಪ್ರಭಾವದಿಂದ ಕುಂದುತ್ತಿದೆ. ಕೆಲವು ಬೆಳೆಗಾರರು ಮಲೆನಾಡ ಕೊಯ್ಲು, ಸಂಸ್ಕರಣೆ ವ್ಯವಸ್ಥೆ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರೂ ಸಫಲವಾಗುತ್ತಿಲ್ಲ. ಕೊಯ್ಲಿಗೆ ದೋಟಿ, ಕೊನೆ ಸಾಗಾಟಕ್ಕೆ ವಾಹನ ಬಳಕೆ, ಸುಲಿಯಲು ಯಂತ್ರ ಹೊರತುಪಡಿಸಿ ಹೆಚ್ಚಿನ ಯಂತ್ರಗಳ ಅಗತ್ಯ ಈ ಭಾಗದಲ್ಲಿ ಇಲ್ಲ' ಎನ್ನುತ್ತಾರೆ ಹಾವೇರಿಯ ಅಡಿಕೆ ಕೃಷಿಕ ಸೋಮಶೇಖರ.

'ಅಡಿಕೆ ಸುಸ್ಥಿರ ಬೆಳೆಯಾಗಿದೆ. ಬೆಲೆಯೂ ಸಾಕಷ್ಟಿದ್ದು, ದರ ಏರಿಳಿಕೆ ಕಡಿಮೆಯಿದೆ. ಅಲ್ಲದೆ, ಶೇ.25ರಷ್ಟು ವ್ಯವಹಾರ ಸಹಕಾರ ಸಂಘಗಳ ಮೂಲಕ ನಡೆಯುತ್ತದೆ. ಟೊಮ್ಯಾಟೊ, ಭತ್ತದಂತೆ ಈ ಬೆಳೆಯಲ್ಲ. ಹಾಗಾಗಿಯೇ ವಿಸ್ತರಣೆಗೆ ಆಸಕ್ತಿ ಹೆಚ್ಚು. ಇದರ ಜತೆ ಮೂರು, ಆರು ತಿಂಗಳ ಬೆಳೆಯ ನಷ್ಟ ನೋಡಿ ಸೋತವರಿಗೆ ಅಡಿಕೆ ತೋಟ ಮಾಡಬೇಕು ಎಂಬ ಕನಸು ಬೆಳೆದಿತ್ತು. ಈ ಪರಿಕಲ್ಪನೆ ಎಲ್ಲೆಡೆ ವಿಸ್ತರಣೆಗೆ ಪ್ರಮುಖ ಕಾರಣವಾಗಿದೆ. ಬಯಲು ಸೀಮೆಯಲ್ಲಿ ಮರ ಹತ್ತುವ ವ್ಯವಸ್ಥೆ ಈ ಹಿಂದೆಯೂ ಇರಲಿಲ್ಲ. ಬಿದಿರಿನ ಗಳದ ದೋಟಿ, ಗೋಣಿಚೀಲ ಬಳಸಿಕೊಂಡು ಕೊಯ್ಲು ಮಾಡುತ್ತಿದ್ದರು. ಈಗೀಗ ಕಾರ್ಬನ್ ಫೈಬರ್ ದೋಟಿ ಬಳಕೆಯಿದೆಯಷ್ಟೆ' ಎನ್ನುತ್ತಾರೆ ಅವರು.



ಅಂಗಳದಲ್ಲಿ ಕೆಂಪಡಿಕೆ ಒಣಗಲು ಹಾಕಿರುವುದು